O.S.No.:370/2018
P.W.:1

ಈ ದಿನ ದಿಃ30.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ**

ನಾನು ಪ್ರತಿವಾದಿ ದಿಲೀಪ್ ಕುಮಾರ್ ಇವರ ವಿರುದ್ದ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿ ನನ್ನ ಜಮೀನನ್ನು ಒತ್ತುವರಿ ಮಾಡಿರುವುದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಪ್ರತಿವಾದಿ ಅಂದಾಜು ಅರ್ಧ ಎಕರೆಯಷ್ಟು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ. ನನಗೆ ಸೇರಿದ 1 ಎಕರೆ 14 ಗುಂಟೆ ಜಮೀನು ಇರುತ್ತದೆ. ಸದರಿ 1 ಎಕರೆ 14 ಗುಂಟೆ ಕ್ಷೇತ್ರದಲ್ಲಿ ಅರ್ಧ ಎಕರೆ ಜಮೀನನ್ನು ಪ್ರತಿವಾದಿ ಒತ್ತುವರಿ ಮಾಡಿರುತ್ತಾನೆ. ಕಳೆದ ಎರಡು ವರ್ಷಗಳ ಹಿಂದೆ ಪ್ರತಿವಾದಿ ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ. ನಾನು ಎಷ್ಟು ಕ್ಷೇತ್ರದಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ಈವರೆಗೂ ಅಳತೆ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ವತ್ತಿನ ಪೂರ್ವಕ್ಕೆ ಶಿವಣ್ಣ ಬಿನ್ ಚನ್ನಮಲ್ಲಶೆಟ್ಟಿ ಇವರ ಜಮೀನು ಇರುತ್ತದೆ, ಪಶ್ಚಿಮಕ್ಕೆ ಮೊದಲು ಮುನಾವರ್ ಎಂಬ ಮುಸ್ಲಿಂ ವ್ಯಕ್ತಿ ಇದ್ದು, ಈಗ ಬೈ ಪಾಸ್ ರಸ್ತೆ ಆಗಿರುತ್ತದೆ, ಉತ್ತರಕ್ಕೆ ಮೊದಲು ಗೋವಿಂದರಾಜು ಇದ್ದು, ಈಗ ರಮೇಶ್ ಇರುತ್ತಾರೆ, ದಕ್ಷಿಣಕ್ಕೆ ಮೊದಲು ಮಾಳಿಗೇಗೌಡ ಇದ್ದು, ಈಗ ನಂಜಯ್ಯ ಇರುತ್ತಾರೆ. ಪ್ರತಿವಾದಿ ದಾವಾಸ್ವತ್ತಿನ ಪೂರ್ವದಿಂದ ಅರ್ಧ ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ. ದಾವಾಸ್ವತ್ತಿನ ಪೂರ್ವ ಮತ್ತು ಉತ್ತರಕ್ಕೆ ತಪ್ಪು ಚಕ್ಕುಬಂದಿಯನ್ನು ವಾದ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ದಾವಾಜಮೀನಿನ ಸರ್ವೆ ನಂ.211/3 ಅಗಿರುತ್ತದೆ. ದಾವಾಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ತಂದೆ ಕೆ ಬಿ ನಾಗರಾಜು ಇವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಿವಣ್ಣ ಇವರ ಜಮೀನು ಆದನಂತರ ಕೆ.ಬಿ

ನಾಗರಾಜು ಇವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ಕೆ ಬಿ ನಾಗರಾಜು ಇವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಕೆ.ಬಿ ನಾಗರಾಜು ಇವರ ಜಮೀನಿನ ಉತ್ತರಕ್ಕೆ ರಮೇಶ್ ಇವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಶಿವಣ್ಣ ಇವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಉತ್ತರಕ್ಕೆ ಸರ್ವೆ ನಂ.211/2 ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.211/2 ರಮೇಶ್ ಇವರಿಗೆ ಸೇರಿದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಸರ್ವೆ ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಉತ್ತರಕ್ಕೆ ನಾಗರಾಜು ಜಮೀನು ಬರುತ್ತದೆ ಎಂದರೆ ಸರಿಯಲ್ಲ.

ನಾನು ದಾವಾಸ್ವತ್ತನ್ನು ಕ್ರಯಕ್ಕೆ ಪಡೆದು 40 ವರ್ಷ ಆಗಿರುತ್ತದೆ. ದಾವಾಸ್ವತ್ತನ್ನು ಕ್ರಯಕ್ಕೆ ಪಡೆದ ಸಂದರ್ಭದಲ್ಲಿ ಕ್ರಯಪತ್ರದಲ್ಲಿನ ಚಕ್ಕುಬಂದಿ ಪೂರ್ವಕ್ಕೆ ಶಿವಣ್ಣ ಬಿನ್ ಚನ್ನಮಲ್ಲಶೆಟ್ಟಿ ಇವರ ಜಮೀನು, ಉತ್ತರಕ್ಕೆ ಮೊದಲು ಗೋವಿಂದರಾಜು ಇದ್ದು, ಈಗ ರಮೇಶ್ ಇರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-1 ಕ್ರಯಪತ್ರದಲ್ಲಿ ಚಕ್ಕುಬಂದಿಯಲ್ಲಿರುವ ಸ್ವತ್ತಿನ ಸ್ವಾಧೀನದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವ ಮತ್ತು ಉತ್ತರಕ್ಕಿರುವ ಪ್ರತಿವಾದಿಯ ತಂದೆಯ ಜಮೀನನ್ನು ಸೇರಿಸಿಕೊಂಡು ಸುಳ್ಳು ಚಕ್ಕುಬಂದಿ ತೋರಿಸಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನನಗೆ ತೊಂದರೆ ಕೊಟ್ಟ ದಿನಾಂಕ ತಿಂಗಳು ವರ್ಷ ಹೇಳಲು ಬರುವುದಿಲ್ಲ, ಅಂದಾಜು 3 ವರ್ಷಗಳ ಹಿಂದೆ ತೊಂದರೆ ನೀಡಿರುತ್ತಾರೆ. ಪ್ರತಿವಾದಿಯ ಜೊತೆ 20 ರಿಂದ 30 ಜನರು ಇದ್ದರು, ಸದರಿಯವರ ಎಲ್ಲಾರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಸದರಿ ಸಂದರ್ಭದಲ್ಲಿ ನಾನು ಮತ್ತು ನನ್ನ

ಹೆಂಡತಿ ಹಾಗೂ ರಾಜು ಎನ್ನುವವರು ಇದ್ದೆವು. ಪ್ರತಿವಾದಿ ತೊಂದರೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ಮತ್ತು ಜಿಲ್ಲಾ ವರಿಷ್ಠಾಧಿಕಾರಿಯನ್ನು ಸಂರ್ಪಕಿಸಿದ್ದು, ಯಾರು ಸಹ ಕ್ರಮ ಕೈಗೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಬೆಳೆದ ರಾಗಿ ಬೆಳೆಯನ್ನು ನಾಶ ಪಡಿಸಿರುತ್ತಾರೆಂದು ನುಡಿಯುತ್ತಾರೆ.

ಪ್ರತಿವಾದಿ ಜನರನ್ನು ಕರೆದುಕೊಂಡು ಬಂದು ದಾವಾಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಗೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಸ್ವಾಧೀನದಲ್ಲಿ ಎಷ್ಟು ವರ್ಷಗಳಿಂದ ಇರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ದಾವಾಸ್ವತ್ತನ್ನು ನಾನು ಕ್ರಯಕ್ಕೆ ಪಡೆಯುವ ಮೊದಲಿನಿಂದಲ್ಲೂ ದಾವಾಸ್ವತ್ತಿನ ಪೂರ್ವ ಮತ್ತು ಉತ್ತರಕ್ಕೆ ಪ್ರತಿವಾದಿಯ ತಂದೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.250/2 ಮತ್ತು 597 ರ ಎರಡು ಜಮೀನುಗಳು ಪ್ರತಿವಾದಿಯ ತಂದೆಗೆ ಸೇರಿದ ಜಮೀನುಗಳು ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಮೀನಿಗೆ ತಂತಿಬೇಲಿಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಮ್ಮನ್ನು ಬೆದರಿಸಿ ಓಡಿಸಿ ತಂತಿಬೇಲಿ ಹಾಕಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯ ಜಮೀನಿನ ತಂತಿಬೇಲಿ ಹಾಕಿದ ಜಮೀನಿನ ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ನನ್ನ ದಾವಾಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿ ಅರ್ಧ ಎಕರೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ದಾವೆ ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇದೇ ಪ್ರಕರಣವನ್ನು ದಾಖಲಿಸಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದಿ ನನ್ನ ಜಮೀನಿನ ಸ್ವಾಧೀನಕ್ಕೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು

ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ಜಮೀನನ್ನು ಒಳಗೊಂಡು ಸುಳ್ಳು ಚೆಕ್ಕುಬಂದಿ ತೋರಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಎಂದಿಗೂ ದಾವಾಸ್ವತ್ತಿನಲ್ಲಿ ಅರ್ಧ ಎಕರೆ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳು ದಾವೆಗೋಸ್ಕರ ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.